ಹುಡುಗಿಯರು-ವಾರ್ಡನ್ ಸಹಿತ ಒಳ ನುಗ್ಗಿದರು. ಅದೇ ದಿನ ವಾರ್ಡನ್ ಹಗಲು ಹೊತ್ತಿನಲ್ಲಿ ಹುಡುಗಿಯರು ಬಾಗಿಲು ಚಿಲಕ ಹಾಕುವಂತಿಲ್ಲ ಎಂದು ಕಟ್ಟುನಿಟ್ಟಾದ ನಿಯಮ ಜಾರಿಗೆ ತಂದರು.

ಕೆಲವು ಜನರು ಜನ್ಮದಿಂದಲೇ ನಿದ್ರಾಶೂರರು. ಅವರಿಗೆ ತಾವು ಮಲಗುವ ಸ್ಥಳವಾಗಲೀ ಅಥವಾ ಹಾಸಿಗೆ-ದಿಂಬು-ಹೊದಿಕೆಯಂತಹ ಪರಿಕರಗಳಾಗಲೀ ಪ್ರಭಾವ ಬೀರುವುದಿಲ್ಲ. ಯಾವುದೇ ಊರಿಗೆ ಹೋಗಲಿ ಅಥವಾ ಎಲ್ಲಿಯೇ ಮಲಗಲಿ ತಮ್ಮ ಸಮಯಕ್ಕೆ ಸರಿಯಾಗಿ ನಿದ್ರಾದೇವಿ ಅವರನ್ನು ಮೈ ಮರೆಸುತ್ತಾಳೆ. ಕೆಲವರಿಗೆ ಹೀಗೆ ಒಮ್ಮೆ ನಿದ್ದೆ ಬಂತೆಂದರೆ ಮುಗಿಯಿತು, ಅವರನ್ನು 8-10 ತಾಸಿನವರೆಗೆ ಎನು ಮಾಡಿದರೂ ಎಬ್ಬಿಸಲು ಸಾಧ್ಯವಿಲ್ಲ. ನಮ್ಮ ಮನೆಯಲ್ಲಿ ಹೈಸ್ಕೂಲು ಕಲಿಯುವುದಕ್ಕೆಂದು ಉಳಿದುಕೊಂಡಿದ್ದ ಅತ್ತಿಗೆಯ ಮಗ ರಾತ್ರಿ 8.30ಕ್ಕೆ ಹೀಗೆ ನಿದ್ರಾವಶನಾಗುತ್ತಿದ್ದ. ಅದಕ್ಕೆ ನಮ್ಮ ಮನೆಯಲ್ಲಿ ಶಟರ್ ಎಳೆಯುವುದು ಎಂದು ಕರೆಯುತ್ತಿದ್ದೆವು. ಸರ್ಕಾರಿ ಬ್ಯಾಂಕು ಇತ್ಯಾದಿಗಳು ಹಾಗೆಯೇ ಅಲ್ಲವೆ? ಒಮ್ಮೆ ವೇಳೆಯಾಯಿತೆಂದು ಶಟರ್ ಎಳೆದು ಬೀಗ ಹಾಕಿದರೆ ಮುಗಿಯಿತು, ನೀವು ಏನೇ ಅಂಗಲಾಚಿ ಬೇಡಿಕೊಂಡರೂ ತೆರೆಯುವುದಿಲ್ಲ. ನಮ್ಮ ಅತ್ತಿಗೆ ಮಗನಿಗೆ ಅದಕ್ಕಾಗಿಯೇ ನಾನು ಸಂಜೆ ಆಗುತ್ತಿದ್ದಂತೆ ಅನ್ನ-ಸಾರು ಇತ್ಯಾದಿ ಊಟದ ವ್ಯವಸ್ಥೆ ಮಾಡಿ ಇಟ್ಟು ನನ್ನ ಉಳಿದ ಕೆಲಸ-ಕಾರ್ಯಗಳ ಕಡೆಗೆ ಗಮನ ಕೊಡುತ್ತಿದ್ದೆ. ಅವನು ಹೋಂವರ್ಕ್ ಮಾಡುತ್ತಲೇ ಶಟರ್ ಎಳೆಯುತ್ತಿದ್ದ. ಈ ಶಟರ್ ಎಳೆಯುವ ಪ್ರಕ್ರಿಯೆಯಲ್ಲಿಯೂ ಕೆಲವು ಹಂತಗಳಿದ್ದಿದ್ದು ನಮಗೆ ಉಪಯುಕ್ತವಾಗಿತ್ತು. ತೂಕಡಿಕೆ ಇದು ಮೊದಲನೇ ಹಂತ. ಬರೆಯುತ್ತಾ ಬರೆಯುತ್ತಾ ತನ್ನ ತಲೆಯನ್ನು ವಾಲಿಸುತ್ತಿದ್ದ. ಅಲ್ಲೇ ಕುಳಿತಿರುತ್ತಿದ್ದ ನನ್ನ ಮಗಳು ಏನೋ ಮಕ್ಕೊಂಡೆಯಾ? ಎಂದು ಕೇಳಿದರೆ ಅವನಿಗೆ ಅವಮಾನವಾಗುತ್ತಿತ್ತು. ಯಾರು ಮಕ್ಕೊಂಡಾರೆ, ಹೋಗೇ ಎಂದು ಬೈಯುತ್ತಿದ್ದ. ಆಮೇಲೆ ಎರಡನೇ ಹಂತದ ಬೀಳುವಿಕೆ ಶುರುವಾಗುತ್ತಿತ್ತು. ಪುಸ್ತಕದ ಮೇಲೆ ದೊಪ್ಪನೆ ಬೀಳುತ್ತಿದ್ದ. ಆಗ ಮಗಳು ಜೋರಾಗಿ ಕಿರುಚುತ್ತಿದ್ದಳು. ಅಮ್ಮಾ ಶಿವೂ ಮಕ್ಕೋಳಾ ಹತ್ಯಾನೆ. ಅದಾಗಲೇ ಅವನ ಕಣ್ಣುಗಳು ಕೆಂಪಡರಿ ದೇಹವು ತೂರಾಡುತ್ತಿತ್ತು. ಮೂರನೇ ಹಂತವಾಗಿ ಅವನು ಎಲ್ಲಿ ಇದ್ದಾನೋ ಅದೇ ಜಾಗದಲ್ಲಿ ಬುಡುಲ್ಲನೇ ಉರುಳಿಕೊಂಡು ನಿದ್ದೆ ಹೋಗುವುದು. ಇದು ಕಟ್ಟ ಕಡೆಯ ಹಂತವಾದ ಕಾರಣ ಆ ನಂತರ ಅವನ ಯಾವುದೇ ಕ್ರಿಯೆಯ ಮೇಲೆ ಅವನಿಗೆ ನಿಯಂತ್ರಣ ಇರುತ್ತಿರಲಿಲ್ಲ. ಊಟವಾಗಿಲ್ಲ, ಬಚ್ಚಲಿಗೆ ಹೋಗಿ ಮೂತ್ರ ವಿಸರ್ಜನೆ ಮಾಡಿ ಬಂದಿಲ್ಲ, ತನ್ನ ಹಾಸಿಗೆಗೆ ತಾನು ಹೋಗಿಲ್ಲ ಎಂಬಿತ್ಯಾದಿ ಪ್ರಾಥಮಿಕ ತಿಳಿವಳಿಕೆಗಳು ಕೂಡ ಜ್ಞಾಪಕವಿರುತ್ತಿರಲಿಲ್ಲ. ಮತ್ತೆ ಬೆಳಗ್ಗೆವರೆಗೆ ಅವನು ಪುಸ್ತಕದ ಮೇಲೆಯೇ ಗೊರಕೆ ಹೊಡೆಯುವುದು. ಖಾಲಿ ಹೊಟ್ಟೆ ಹಾಗೂ ಖಾಲಿ ಮಾಡದ ಕಿಬ್ಬೊಟ್ಟೆ ಇವೆರಡರಿಂದ ಬೆಳಗ್ಗೆ ಅವನಿಗೆ ಹೊಟ್ಟೆನೋವು ಬಂದಿರುತ್ತಿತ್ತು. ಹಾಗಾಗಿ ನನ್ನ ಮಗಳು ಮೊದಲನೇ ಹಂತ ಕಂಡ ಕೂಡಲೇ ಅವನಿಗೆ ಊಟಕ್ಕೆ ಎಬ್ಬಿಸುತ್ತಿದ್ದಳು.

ಸಾವು ಎಂದರೆ ಅದು ಶಾಶ್ವತ ನಿದ್ದೆ ಮತ್ತೇನಲ್ಲ ಎಂದು ಜ್ಞಾನಿಗಳು ಹೇಳುತ್ತಾರೆ. ಹಾಗಾದಾರೆ ನಿದ್ದೆ ಎನ್ನುವುದನ್ನು ತಾತ್ಕಾಲಿಕ ಸಾವು ಅಂತಲೂ ಅರ್ಥೈಸಬಹುದಲ್ಲವೆ? ಇದಕ್ಕೆ ಪೂರಕವಾಗಿ ಅನೇಕ ಸಂಗತಿಗಳನ್ನು ನಾನು ಕಂಡುಂಡು ಅನುಭವಿಸಿದ್ದೇನೆ. ನಾವೊಮ್ಮೆ ಕೆಂಪು ಸರ್ಕಾರಿ ಬಸ್ಸಿನಲ್ಲಿ ರಾತ್ರಿ ಬೆಂಗಳೂರಿಗೆ ಪಯಣಿಸುವಾಗ ಎಲ್ಲರೂ ತಮ್ಮ ತಮ್ಮ ಸೀಟಿನಲ್ಲಿ ಉದ್ದಕ್ಕೆ ಉರುಳಿಕೊಂಡು ನಿದ್ರಾದೇವಿಗೆ ಶರಣಾಗಿದ್ದರು. ಯಾವುದೋ ಬಸ್ ನಿಲ್ದಾಣದಲ್ಲಿ ಬಸ್ ನಿಂತಾಗ ಡ್ರೈವರ್, ಕಂಡಕ್ಟರ್ ಸಹಿತ ಪುರುಷರೆಲ್ಲ ಮೂತ್ರ ವಿಸರ್ಜನೆಗಾಗಿ ಕತ್ತಲು ಮೂಲೆಯನ್ನು ಆಶ್ರಯಿಸಿ ಹೋಗಿ ಬಂದರು. ಎಲ್ಲರೂ ಬಂದಿರುವರೇ ಎಂದು ಕಂಡಕ್ಟರ್ ಎಣಿಸಿ ನೋಡಿದಾಗ ಒಬ್ಬ ಕಡಿಮೆಯಿದ್ದ. ಸೀಟಿನ ಮೇಲೆ ಗೊರಕೆ ಹೊಡೆಯುತ್ತಿದ್ದ ಅವನ ಜೊತೆಗಾರನನ್ನು ಎಬ್ಬಿಸಿ ಕೇಳಿದಾಗ ಆಗಲೇ ವಂದಕ್ಕ ಹೋದರಿ, ನನ್ನ ಕರೆದ, ನಿದ್ದಿ ಜೋರೈತಿ ನಾ ವಲ್ಲೆ ಅಂದೆರಿ, ಅಂವ ಒಬ್ಬನ ಹೋದರಿ ಅಂದ. ಡ್ರೈವರ್ ಹೋಗಿ ನೋಡಿ ಬಾ ದೌಡ, ಇನ್ನ ಮುಂದ ಹೋಗುದೇತಿ, ಬೆಳತನ ಇದನ ಮಾಡೂ ಅಂದ್ರ ಹೆಂಗೊ ಎಂದು ಬೈದಾಗ ಅವನ ಜೊತೆಗಾರ ಗೆಳೆಯನ ಹೆಸರನ್ನು ದೊಡ್ಡ ಧ್ವನಿಯಲ್ಲಿ ಕಿರುಚುತ್ತ ಮುಂದೆ ಹೋದ. ಮೊಬೈಲುಗಳಿಲ್ಲದ ಕಾಲವದು. ಸ್ವಲ್ಪ ಹೊತ್ತಿಗೆ ಅಯ್ಯೋ ಅಮ್ಮಾ ಸತ್ತೆ ಎಂಬ ಕೂಗು ಕತ್ತಲೆಯಿಂದ ಬಂದಾಗ ಬಸ್ಸಿನಲ್ಲಿದ್ದ ಉಳಿದ